# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ ಕಂಪ್ಲೇಂಟ್/ಉಪಲೋಕ್/ಬಿಜಿಎಂ-325/2014/ಎಆರ್‌ಇ-6, ಕಂಪ್ಲೇಂಟ್/ಉಪಲೋಕ್/ಬಿಜಿಎಂ-326/2014/ಎಆರ್‌ಇ-6, ದಿನಾಂಕ 24.11.2014.
2. ಸರ್ಕಾರದ ಸಮಸಂಖ್ಯೆಯ ದಿನಾಂಕ: 12.05.2015 ರ ಕಾರಣ ಕೇಳುವ ನೋಟೀಸ್.
3. ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ:18.09.2015.
4. ವಿಚಾರಣಾ ತಿಳುವಳಿಕೆ ಪತ್ರ, ದಿನಾಂಕ: 06.09.2016.
5. ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ದಿನಾಂಕ 24.09.2016 ರಂದು ನಡೆದ ವಿಚಾರಣೆಯಲ್ಲಿ ನೀಡಿರುವ ಲಿಖಿತ ಹೇಳಿಕೆ.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಲಗತ್ತಿಸಿ ಕಳುಹಿಸಿರುವ ದಿನಾಂಕ: 24.11.2014ರ ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಪತ್ರದ ಸಂಗಡ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3) ರ ಅಡಿ ಸಲ್ಲಿಸಿರುವ ದಿನಾಂಕ 20.11.2014 ರ ವರದಿಯಲ್ಲಿ ಶ್ರೀ ಮಂಜಪ್ಪ ತಮ್ಮಣ್ಣ ವೈದ್ಯ ಮತ್ತು ಶ್ರೀ ಗಣೇಶ್ ಈರಪ್ಪ ಹೆಗಡೆ ಇವರುಗಳು ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು, ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ದೂರು ದಾಖಲಿಸಿ 2009-10ನೇ ಸಾಲಿನಲ್ಲಿ ವಾಲಗಳ್ಳಿ ಗ್ರಾಮಪಂಚಾಯತಿಯಲ್ಲಿ ನಡೆದ ನರೇಗಾ ಯೋಜನೆಯಡಿಯಲ್ಲಿ ಸುಮಾರು 38 ಕಾಮಗಾರಿಗಳು ಹಣದ ದುರ್ಬಳಕೆ, ದುರುಪಯೋಗ ಮತ್ತು ಅನಗತ್ಯವಾಗಿ ವ್ಯರ್ಥವಾಗಿದೆ ಎಂದು ಸಲ್ಲಿಸಿದ ದೂರಿನನ್ವಯ ಕೈಗೊಂಡ ತನಿಖಾ ವರದಿಯಲ್ಲಿ ಶ್ರೀ ಬಸ್ತಾವ ಡುಮ್ಮಿಂಗ್ ಕರ್ತವ್ಯಲೋಪವೆಸಗಿರುವುದರಿಂದ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು ಇವರಿಗೆ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸದರಿಯವರು ಲಿಖಿತ ಹೇಳಿಕೆ ನೀಡಿ ತನ್ನ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ ಅನುಷ್ಠಾನಗೊಳಿಸಿದ ಎಲ್ಲಾ ಕಾಮಗಾರಿಗಳನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವುದಾಗಿ ವಿವರಣೆ ನೀಡಿರುತ್ತಾರೆ ಹಾಗೂ ತನ್ನ ಅವಧಿಯಲ್ಲಿ ತಾನು ಯಾವುದೇ ರೀತಿಯ ಅವ್ಯವಹಾರವನ್ನಾಗಲಿ, ಅಸಭ್ಯವಾಗಿ ವರ್ತಿಸಿರುವುದಾಗಲಿ ಇರುವುದಿಲ್ಲವೆಂದು ಸ್ಪಷ್ಟೀಕರಣ ನೀಡಿರುತ್ತಾರೆ. ಆದ್ದರಿಂದ ತನ್ನ ಮೇಲೆ ಇರುವ ಆರೋಪವನ್ನು ಕೈಬಿಡುವಂತೆ ವಿನಂತಿಸಿಕೊಂಡಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು ಇವರಿಗೆ ವಿಚಾರಣೆಗೆ ಹಾಜರಾಗಲು ತಿಳುವಳಿಕೆ

ಪತ್ರ ನೀಡಲಾಗಿದ್ದು, ಸದರಿಯವರು ದಿನಾಂಕ: 24.09.2016 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಇವರ ನ್ಯಾಯಾಲಯದಲ್ಲಿ ನಡೆದ ಮೌಖಿಕ ವಿಚಾರಣೆಗೆ ಹಾಜರಾಗಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಸಲಾಗಿದೆ. ದಾಖಲೆಗಳನ್ನು ಪರಿಶೀಲಿಸಲಾಗಿ 2009-10ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ವಾಲಗಳ್ಳಿಯಲ್ಲಿ ಸುಮಾರು 38 ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು, ನಾಮಿನಲ್ ಮಸ್ಟರ್ ರೋಲ್‌ಗಳಲ್ಲಿ ನೌಕರರ ಹೆಸರುಗಳನ್ನು ತಪ್ಪಾಗಿ ನಮೂದಿಸಿ ತಿದ್ದಿರುವುದು ಕಂಡುಬಂದಿದ್ದು ಮತ್ತು ಎಂ.ಎನ್. ಕೆಮಿಕಲ್ಸ್ ಸಂಸ್ಥೆಯ 4 ಕಾಯಂ ನೌಕರರುಗಳನ್ನು ಎಂ.ಜಿ.ಅನ್.ಆರ್.ಇ.ಜಿ. ಯೋಜನೆಯ ನಾಮಿನಲ್ ಮಸ್ಟರ್ ರೋಲ್‌ನಲ್ಲಿ ನಮೂದಿಸಿ ಅವರ ಬ್ಯಾಂಕ್ ಖಾತೆಗೆ ದಿನಗೂಲಿ ಪಾವತಿಸಿರುವುದು ಕಂಡು ಬಂದಿದ್ದು, ಎಂ.ಜಿ.ಅನ್.ಆರ್.ಇ.ಜಿ. ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಂತೆ ವಾಲಗಳ್ಳಿ ಗ್ರಾಮ ಪಂಚಾಯತಿ ಸದಸ್ಯತ್ವದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/29/ಗ್ರಾಪಂಅ/2015 ಬೆಂಗಳೂರು, ದಿನಾಂಕ: 20.03.2017.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ವಾಲಗಳ್ಳಿ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

**(ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿತ)**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ವಿ.ಅರುಣ್‌ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಪ್ರತಿಗಳು:</u>**

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2) ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ ಜಿಲ್ಲೆ,
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
5) ಶ್ರೀ ಬಸ್ತಾವ ಡುಮ್ಮಿಂಗ್, ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ
6) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವಾಲಗಳ್ಳಿ ಗ್ರಾಮ ಪಂಚಾಯತಿ, ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
7) ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.